**ಪತ್ರಿಕಾ ಪ್ರಕಟಣೆ**

**ಬೆಂಗಳೂರು, 22ನೇ ಜುಲೈ 2017.**

**'ಪಿಎಸಿ ರೌಂಡ್‌ಟೇಬಲ್‌ನಲ್ಲಿ ಜಿಎಸ್‌ಟಿ ಡಿಮಿಸ್ಟಿಫೈಡ್'**

ಲಾಭದಾಯಕವಲ್ಲದ ಚಿಂತಕರ ಚಾವಡಿಯಾದ ಪಬ್ಲಿಕ್ ಅಫೇರ್ಸ್ ಸೆಂಟರ್ (ಪಿಎಸಿ) ಹೊಸ ತೆರಿಗೆ ಸುಧಾರಣೆಯಾದ ' ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ)ಯು ಆರ್ಥಿಕತೆಯ ಮೇಲೆ ಹೇಗೆ ಸಂಕೀರ್ಣ ಪರಿಣಾಮಗಳನ್ನು ಬೀರಿದೆ ಎಂಬುದನ್ನು ಚರ್ಚಿಸಲು 'ನ್ಯೂ ಬಿಗಿನಿಂಗ್ಸ್' ಎಂಬ ರೌಂಡ್‌ಟೇಬಲ್ ಕಾರ್ಯಕ್ರಮವನ್ನು ಆಯೋಜಿಸಿದೆ. ಈ ಕಾರ್ಯಕ್ರಮದಲ್ಲಿ ಶ್ರೀ. ರಿತ್ವಿಕ್ ಪಾಂಡೆ, ಭಾ.ಆ.ಸೇ., ವಾಣಿಜ್ಯ ತೆರಿಗೆ ಕಮೀಷನರ್, ಕರ್ನಾಟಕ ಸರ್ಕಾರ, ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ, ಅಧ್ಯಕ್ಷರು, ಪಿಎಸಿ, ಮುಖ್ಯ ಅತಿಥಿ ಶ್ರೀ. ವಿನೋದ್ ಕುಮಾರ್, ಐ.ಆರ್.ಎಸ್, ಪ್ರಧಾನ ಕಮೀಷನರ್, ಕೇಂದ್ರ ತೆರಿಗೆ, ಭಾರತ ಸರ್ಕಾರ ಹಾಗು ಉದ್ಯಮ ಸಂಘಗಳು ಭಾಗವಹಿಸುತ್ತಾರೆ.

ಇಂತಹ ಕಾರ್ಯಕ್ರಮಗಳ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುತ್ತಾ ಪಿಎಸಿಯ ನಿರ್ದೇಶಕರಾದ ಶ್ರೀ. ಗುರುಚರಣ್ ರವರು " ಜಿಎಸ್‌ಟಿ ಬಗ್ಗೆ ಜನಸಾಮನ್ಯರಲ್ಲಿ ಸಾಕಷ್ಟು ಆತಂಕವಿದೆ, ಇಂತಹ ಚರ್ಚೆ ಮತ್ತು ವಾದಗಳ ಮೂಲಕ ಭಾರತ ಸರ್ಕಾರವು ಹೊರತಂದಿರುವ ಮಹತ್ವದ ಉಪಕ್ರಮದ ಸುತ್ತಲಿರುವ ಅನೇಕ ಸಮಸ್ಯೆಗಳನ್ನು ಬಗೆಹರಿಸಬಹುದೆಂದು ನಾವು ಭಾವಿಸುತ್ತೇವೆ ಎಂದು ಅಭಿಪ್ರಾಯಿಸಿದ್ದಾರೆ".

ಜಿಎಸ್‌ಟಿ ಬಗ್ಗೆ ಬೆಳಕು ಚೆಲ್ಲಲು ಇಂತಹ ರೌಂಡ್‌ಟೇಬಲ್‌ಗಳು ಸ್ವಾಗತಾರ್ಹ ಎನ್ನುತ್ತಾ ಶ್ರೀ. ಕುಮಾರ್ ರವರು "ಜಿಎಸ್‌ಟಿಯ ಸೂಕ್ಷ್ಮ ವ್ಯತ್ಯಾಸಗಳನ್ನು ಚರ್ಚಿಸಲು ಉದ್ಯಮಿಗಳು ಮತ್ತು ಸರ್ಕಾರವನ್ನು ಒಂದೇ ವೇದಿಕೆಯಲ್ಲಿ ಆಹ್ವಾನಿಸಿರುವುದು ಸ್ವಾಗತಾರ್ಹ. ಜಿಎಸ್‌ಟಿಯು ಸಾಮಾನ್ಯ ವ್ಯಕ್ತಿಯ ತೆರಿಗೆ ಹೊರೆಯನ್ನು ಕಡಿಮೆಗೊಳಿಸುತ್ತದೆ ಮತ್ತು ಸಂಕೀರ್ಣವಾದ ತೆರಿಗೆ ರಚನೆಯನ್ನು ಸರಳಗೊಳಿಸುತ್ತದೆ ಎಂಬ ಭರವಸೆಯನ್ನು ನಾವು ಹೊಂದಿದ್ದೇವೆ" ಎಂದಿದ್ದಾರೆ.

ಕಾರ್ಪೋರೇಟ್ ವಲಯದಲ್ಲಿ ಜಿಎಸ್‌ಟಿ ಪರಿಣಾಮದ ಬಗ್ಗೆ ಟೊಯೋಟಾ ಕಿರ್ಲೋಸ್ಕರ್ ಮೋಟರ್ಸ್ ಪ್ರೈವೇಟ್ ಲಿಮಿಟೆಡ್‌ನ ಉಪಾಧ್ಯಕ್ಷರಾದ ಶ್ರೀ. ಶೇಖರ್ ವಿಶ್ವನಾಥನ್‌ರವರು " ಜಿಎಸ್‌ಟಿಯ ಬಗ್ಗೆ ಇರುವ ಊಹಪೂಹಗಳು ಮತ್ತು ತಪ್ಪುಗ್ರಹಿಕೆಯನ್ನು ಹೊರತರಲು ಸಹಾಯ ಮಾಡಲು ನಾವು ಪಿಎಸಿ ಜೊತೆಗೆ ಪಾಲುದಾರಿಕೆಯನ್ನು ಮಾಡಿಕೊಂಡಿದ್ದೇವೆ. ಜಿಎಸ್‌ಟಿಯು ಇಡೀ ದೇಶವನ್ನು ಒಂದು ವೇದಿಕೆಗೆ ತರಲಿದೆ ಮತ್ತು ಮಾರಾಟವನ್ನು ಹೆಚ್ಚಿಸಲು ಸಹಾಯಕವಾಗುವ ಅನೇಕ ಉತ್ಪನ್ನಗಳ ಬೆಲೆಗಳನ್ನು ಕಡಿಮೆ ಮಾಡಲು ಇದು ಸಹಾಯ ಮಾಡುತ್ತದೆ ಎಂದು ನಾವು ಭಾವಿಸಿದ್ದಾರೆ".

ಕರ್ನಾಟಕದಲ್ಲಿ ಜಿಎಸ್‌ಟಿಯು ತಕ್ಷಣ ಮತ್ತು ದೀರ್ಘಾಕಾಲದಲ್ಲಿ ಉಂಟಾಗುವ ಪರಿಣಾಮಗಳ ಬಗ್ಗೆ ಬೆಳಕು ಚೆಲ್ಲುತ್ತಾ ಶ್ರೀ. ಪಾಂಡೆ ರವರು "ದೇಶದಲ್ಲಿ ಇಡೀ ತೆರಿಗೆ ವ್ಯವಸ್ಥೆಯನ್ನು ಸರಳಗೊಳಿಸುವಲ್ಲಿ ಇರುವ ತೊಡಕುಗಳನ್ನು ಪರಿಗಣಿಸಿದರೆ ಜಿಎಸ್‌ಟಿ ಹಾದಿ ಸುಲಭದಾಯಕವಲ್ಲ ಎಂದಿದ್ದಾರೆ". ಹಾಗೆಯೇ ರಾಜ್ಯದಲ್ಲಿ ಅಗತ್ಯವಸ್ತುಗಳ ಬೆಲೆಗಳನ್ನು ತಗ್ಗಿಸುವಲ್ಲಿ ಜಿಎಸ್‌ಟಿಯು ಪ್ರಮುಖವಾಗಿದೆ ಎಂಬುದರ ಬಗ್ಗೆ ಒತ್ತು ನೀಡಿದ್ದಾರೆ.

ಪಿಎಸಿಯ ಈ ರೌಂಡ್ ಟೇಬಲ್‌ನಲ್ಲಿ ಪ್ರಖ್ಯಾತ ಅರ್ಥಶಾಸ್ತ್ರಜ್ಞರು ಮತ್ತು ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್‌ನ ಪ್ರಾಧ್ಯಾಪಕರಾದ ಶ್ರೀ. ನರೇಂದ್ರ ಪಾಣಿಯವರು ಈ ಕಾರ್ಯಕ್ರಮವನ್ನು ಮಾಡರೇಟ್ ಮಾಡಲಿದ್ದಾರೆ. ಶ್ರೀ. ಆರ್. ಶ್ರೀರಾಮ್, ಕೇಂದ್ರೀಯ ತೆರಿಗೆ ಕಮಿಷನರ್, ಬೆಂಗಳೂರು ಪೂರ್ವ, ಶ್ರೀ. ರವಿ ಪ್ರಸಾದ್, ಜಂಟಿ ಕಮಿಷನರ್ ವಾಣಿಜ್ಯ ತೆರಿಗೆ, ಕರ್ನಾಟಕ ಸರ್ಕಾರ, ಸಿ.ಎ. ಶ್ರೀ. ವಿ. ರಘುರಾಮನ್, ಪ್ರತಿನಿಧಿ, ಇನ್ಸ್ಟಿಟ್ಯೂಟ್ ಆಫ್ ಚಾರ್ಟಡ್ ಅಕೌಂಟೆಂಟ್ಸ್ ಆಫ್ ಇಂಡಿಯ(ಐಸಿಎಐ)–ಬೆಂಗಳೂರು ಶಾಖೆ, ಶ್ರೀ. ಪ್ರವೀಣ್ ವಿಲಿಯಂ, ಪಾಲುದಾರರು – ನೇರ ತೆರಿಗೆ, ಕೆಪಿಎಂಜಿ ಮತ್ತು ಪಾಲುದಾರರು– ತೆರಿಗೆ ಮತ್ತು ನಿಯಂತ್ರಣ ಸೇವೆ, ಇ ಅಂಡ್ ವೈ, ಶ್ರೀಮತಿ. ಜಯಶ್ರೀ ಪಾರ್ಥಸಾರಥಿ ಯವರನ್ನು ಒಳಗೊಂಡಿದೆ.

ಈ ರೌಂಡ್ ಟೇಬಲ್ ಕಾರ್ಯಕ್ರಮವನ್ನು ಟೊಯೋಟಾ ಕಿರ್ಲೋಸ್ಕರ್ ಮೋಟರ್ಸ್ ಪ್ರೈವೇಟ್ ಲಿಮಿಟೆಡ್ ಬೆಂಬಲದಿಂದ ಆಯೋಜಿಸಲಾಗಿದೆ.

**ಪಬ್ಲಿಕ್ ಅಫೇರ್ಸ್ ಸೆಂಟರ್ ಬಗ್ಗೆ:**
ಪಬ್ಲಿಕ್ ಅಫೇರ್ಸ್ ಸೆಂಟರ್ (ಪಿಎಸಿ) ಒಂದು ಚಿಂತನಶೀಲಾ, ಸರ್ಕಾರೇತರ ಸಂಸ್ಥೆಯಾಗಿದ್ದು, 1994ರಲ್ಲಿ ಸ್ಥಾಪಿತವಾಗುವುದರ ಮೂಲಕ ಭಾರತದಲ್ಲಿ ಸರ್ಕಾರದ ಆಡಳಿತದ ಗುಣಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ

ಕಾರ್ಯನಿರ್ವಹಿಸಲು ತನ್ನನ್ನು ತಾನು ತೊಡಗಿಸಿಕೊಂಡಿದೆ. ಸರ್ಕಾರದ ಕಾರ್ಯಕ್ರಮಗಳ ಅನುಷ್ಠಾನದ ಮೌಲ್ಯಮಾಪನ ಮತ್ತು ಆಡಳಿತದ ಪ್ರಕ್ರಿಯೆಯಲ್ಲಿ ನಾಗರಿಕರ ಸಹಭಾಗಿತ್ವವನ್ನು ಪ್ರೋತ್ಸಾಹಿಸುತ್ತಿದೆ. ಪಿಎಸಿಯು ಪ್ರಾಥಮಿಕವಾಗಿ ಪಬ್ಲಿಕ್ ಪಾಲಿಸಿ ರಿಸರ್ಚ್ ಮತ್ತು ಆಡಳಿತದಲ್ಲಿ ನಾಗರಿಕರ ಭಾಗವಹಿಸುವಿಕೆಯತ್ತಾ ಕೆಲಸ ಮಾಡುತ್ತಿದೆ. ಪಿಎಸಿಯು ಪ್ರಾಥಮಿಕವಾಗಿ ಗಮನಹರಿಸುವ ಕ್ಷೇತ್ರವೆಂದರೆ ನಾಗರೀಕರು ಹಾಗೂ ನಾಗರೀಕ ಸಮಾಜದ ಸಂಸ್ಥೆಗಳ ಆಡಳಿತ ಸುಧಾರಣೆಯನ್ನು ತರುವಲ್ಲಿ ಸಕ್ರೀಯ ಪಾತ್ರವಹಿಸುವಂತೆ ಮಾಡುವುದು. ಇದಕ್ಕೆ ಪೂರಕವಾಗಿ ಪಿಎಸಿ ಸಂಶೋಧನೆಗಳನ್ನು ಮಾಡುವುದು, ಸಂಶೋಧನೆಗಳಿಂದ ಹೊರಬಂದ ಅಂಶಗಳನ್ನು ಹಂಚಿಕೊಳ್ಳುವುದು ಹಾಗೂ ನಾಗರೀಕರಲ್ಲಿ ಸರ್ಕಾರದ ಸೇವೆಗಳ ಬಗ್ಗೆ ಅರಿವು ಮೂಡಿಸುವುದರ ಮೂಲಕ ರಾಜ್ಯ ಹಾಗೂ ರಾಜ್ಯೇತರ ಸಂಸ್ಥೆಗಳು ಸಕ್ರೀಯವಾಗಿ ಕಾರ್ಯನಿರ್ವಹಿಸುವಂತೆ ವಕಾಲತ್ತು ವಹಿಸುವ ಸೇವೆ ಸಲ್ಲಿಸುತ್ತಿದೆ. ಹೆಚ್ಚಿನ ಮಾಹಿತಿಗಾಗಿ *www.pacindia.org* ಭೇಟಿ ನೀಡಿ